ವಿಷಯ ಅವನಿಗೆ ತಿಳಿದಿತ್ತು. ಟೇಪಚೂವಿನ ಮೆದುಳಿನಲ್ಲಿ ಭಯದ ಒಂದು ಸಣ್ಣ ರೇಖೆಯೂ ಸುಳಿದಿರಲಿಲ್ಲ.


ಅವನು ಅಳಿಲಿನಂತೆ ತಾಳೆ ಮರವನ್ನು ಒಮ್ಮೆಲೆ ಅಪ್ಪಿಕೊಂಡು, ಮೇಲಕ್ಕೇರಲು ಆರಂಭಿಸಿದ. ಕಾಲುಗಳಿಗೆ ಬಿದಿರಿನ ಹಗ್ಗದ ಏಣಿಯೂ ಇರಲಿಲ್ಲ. ಅವನು ಅಂಗೈ ಮೂಲಕ ಮೇಲಕ್ಕೆ ಹತ್ತುತ್ತಿದ್ದ. ಮದನಾ ಸಿಂಗ್ ದೂರದ ಮಾವಿನ ಮರವೊಂದರ ಕೆಳಗೆ ಟವಲ್ ಹಾಸಿಕೊಂಡು ನಿದ್ರಿಸುತ್ತಿರುವುದನ್ನು ನೋಡಿದ. ಈಗ ಟೇಪಚೂ ಸಾಕಷ್ಟು ಎತ್ತರದಲ್ಲಿದ್ದ. ಮಾವು, ಹಿಪ್ಪೆ, ತಾರೆಕಾಯಿ ಮತ್ತು ಸಾಗವಾನಿ ಮರಗಳು ಕುಳ್ಳಗೆ ಕಾಣಿಸುತ್ತಿದ್ದವು. 'ನಾನೊಂದು ವೇಳೆ ಹದ್ದಿನಂತೆ ಹಾರಬಲ್ಲವನಾಗಿದ್ದರೆ ಎಷ್ಟು ಮಜವಿರುತ್ತಿತ್ತು' ಎಂದು ಯೋಚಿಸುತ್ತಾ ಕೆಳಗೆ ನೋಡಿದಾಗ, ಅವನ ಮೊಣಕಾಲುಗಳ ಬಳಿ ಒಂದು ಕೆಂಪು ಇರುವೆ ತೆವಳುತ್ತಿತ್ತು. 'ಬೇವರ್ಸಿ ನನ್ಮಗಂದು' ಎಂದು ಅದಕ್ಕೆ ಹಳಿದು, ಮಡಿಕೆಯ ಸಮೀಪಕ್ಕೆ ಹೋಗಲಾರಂಭಿಸಿದ.

ಮದನಾ ಸಿಂಗ್ ಈಗ ಮೈಮುರಿಯುತ್ತಾ, ತನ್ನ ನಿದ್ರೆ ಈಗ ಮುಗಿದಿದೆ ಎಂಬುದನ್ನು ಹೇಳುತ್ತಿದ್ದ. ಈಗ ಅಷ್ಟು ಮಬ್ಬು ಸಹ ಇರಲಿಲ್ಲ. ಕೆಲಸವನ್ನು ತತ್‌ಕ್ಷಣ ಪೂರೈಸಬೇಕಿತ್ತು. ಟೇಪಚೂ ಮಡಿಕೆಯನ್ನು ಅಲುಗಾಡಿಸಿದ. ಮಡಿಕೆಯಲ್ಲಿ ಸೇಂದಿ ನಾಲ್ಕನೇ ಒಂದು ಭಾಗದಷ್ಟು ತುಂಬಿತ್ತು. ಅವನು ಮಡಿಕೆಯೊಳಗೆ ಕೈಹಾಕಿ ಅದರ ಆಳವನ್ನು ನೋಡಲು ಬಯಸಿದ...

ಸರಿ, ಆಗಲೇ ಅವಾಂತರ ಸಂಭವಿಸಿತು.

ಮಡಿಕೆಯಲ್ಲಿ ವಿಷಪೂರಿತ ನಾಗರ ಹಾವು ನುಗ್ಗಿತ್ತು. ಸೇಂದಿ ಕುಡಿದ ಅವನೂ ಮೈಮರೆತಿದ್ದ. ಟೇಪಚೂನ ಕೈ ಮಡಿಕೆಯೊಳಗೆ ಹೋದಾಗ ಅದು ಅವನ ಕೈಗೆ ಸುತ್ತಿಕೊಂಡಿತು. ಟೇಪಚೂನ ಮುಖ ಬೂದಿಯಂತೆ ಬಿಳುಪಾಯಿತು. ಅವನು ಹದ್ದಿನಂತೆ ಹಾರುವ ಚೇಷ್ಟೆ ಮಾಡಿದ. ತಾಳೆ ಮರ ಒಂದು ಕಡೆಗಾದರೆ, ಅದಕ್ಕೆ ಸಮಾನಾಂತರದಲ್ಲಿ ಟೇಪಚೂ ಭಾರದ ಕಲ್ಲಿನಂತೆ ಕೆಳಗೆ ಬೀಳುತ್ತಿದ್ದ. ಮಡಿಕೆ ಅವನ ಹಿಂದಿತ್ತು.

ಟೇಪಚೂ ನೆಲದ ಮೇಲೆ ಧೊಪ್ಪನೆ ಬಿದ್ದಾಗ ಸಾಯುವ ಮನುಷ್ಯನಂತೆ ಅಂತಿಮವಾಗಿ ನರಳುವ ಧ್ವನಿಯೂ ಅದರೊಂದಿಗೆ ಸೇರಿಕೊಂಡಿತ್ತು. ನಂತರ ಮಡಿಕೆ ಬಿದ್ದು ಅದರ ಚೂರು-ಚೂರು ಚೆಲ್ಲಾಪಿಲ್ಲಿಯಾದವು. ಕಪ್ಪು ನಾಗರ ಒಂದು ಕಡೆಗೆ ಬಿದ್ದಿದ್ದು, ಅದರ ಬೆನ್ನೆಲುಬು ಮುರಿದಿತ್ತು.



ಮದನ ಸಿಂಗ್ ಓಡಿ ಬಂದು ನೋಡಿ ಬೆರಗಾದ; ಸೇಂದಿಯ ಮಡಿಕೆಯೊಂದಿಗೆ ಟೇಪಚೂ ಬೀಳುವುದನ್ನು ನೋಡಿದ್ದ. ಅವನು ಉಳಿಯುವ ಸಾಧ್ಯತೆ ಇರಲಿಲ್ಲ. ಅವನು ಒಂದೆರಡು ಬಾರಿ ಟೇಪಚೂನನ್ನು ಅಲುಗಾಡಿಸಿದ. ನಂತರ ಹಳ್ಳಿಗೆ ಅವಘಡದ ಸುದ್ದಿಯನ್ನು ಮುಟ್ಟಿಸಲು ಓಡಿದ.

ಫಿರೋಜಾ ಎದೆ ಬಡಿದುಕೊಂಡು ರೋದಿಸುತ್ತಾ, ಸುಮಾರಾಗಿ ಹಳ್ಳಿಯವರನ್ನೆಲ್ಲಾ